**ದಿನಾಂಕ 24.11.2022 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಜಿ.ಎಸ್.ಎಸ್. ವಕೀಲರಿಂದಃ**

1. ದಿನಾಂಕ 02.08.2005 ರಲ್ಲಿ ರಾಮಕೃಷ್ಣಪ್ಪನವರಿಂದ ನಾನು ದಾವಾ ಐಟಂ ನಂ. 25 ರ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ, ಆ ರೀತಿ ಖರೀದಿ ಮಾಡುವ ಒಂದು ವರ್ಷದ ಹಿಂದೆ ಬಾಯಿ ಮಾತಿನಲ್ಲಿ ಅಗ್ರಿಮೆಂಟ್ ಮಾಡಿಕೊಂಡಿದ್ದೇನೆ. ಸಾಕ್ಷಿದಾರರು ರಾಮಕೃಷ್ಣ ರವರ ಕುಟುಂಬದವರೇ ಇದ್ದರು ಬೇರೆ ಯಾರೂ ಇರಲಿಲ್ಲ. ವಾದಿ ರೇಣುಕಾದೇವಿ ರಾಮಕೃಷ್ಣಪ್ಪನವರ ಮಗಳು ಎಂದು ನನಗೆ ಗೊತ್ತಿತ್ತು. ರೇಣುಕಾದೇವಿ ಅವರ ಸಹಿ ಪಡೆಯುವುದು ಅವಶ್ಯ ಎಂದು ನನಗೆ ಗೊತ್ತಿತ್ತು ಎಂದರೆ ಸರಿ. ರಾಮಕೃಷ್ಣಪ್ಪನವರ ಹತ್ತಿರ ಯಾವುದೇ ವ್ಯಾಪಾರ ಮಾಡಿಲ್ಲ ಮತ್ತು ಯಾವುದೇ ದುಡ್ಡು ಕೊಟ್ಟಿಲ್ಲದಿದ್ದರೂ, ಅವರ ಮರಣಾನಂತರ ರೇಣುಕಾದೇವಿಯವರಿಗೆ ಮೋಸ ಮಾಡುವ ಉದ್ದೇಶದಿಂದ 1 ನೇ ಪ್ರತಿವಾದಿ ರಘುನಂದನ್ ಜೊತೆ ಶಾಮೀಲಾಗಿ ಸುಳ್ಳು ಕ್ರಯ ಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.
2. ನನ್ನ ಕ್ರಯ ಪತ್ರದಲ್ಲಿ ರಘುನಂದನ್ ರವರಿಗೆ ವಿಭಾಗದ ಮುಖಾಂತರ ಆಸ್ತಿ ಬಂದಿದೆ ಎಂದು ತೋರಿಸಿದ್ದು ರಘುನಂದನ್ ರವರಿಂದ ಸದರಿ ವಿಭಾಗ ಪತ್ರವನ್ನು ನಾನು ಪಡೆದುಕೊಂಡಿಲ್ಲ ದಾವಾ ಐಟಂ ನಂ. 25 ರ ಆಸ್ತಿಯು ರಘುನಂದನ್ ರವರಿಗೆ ಮಾರಾಟ ಮಾಡಲು ಯಾವುದೇ ಸಂಪೂರ್ಣ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**